**ಅಮಲ್ಜಾರಿ ಸಂಖ್ಯೆ** 4/2020 **ಓ.ಡಬ್ಲೂಃ** 1

ಸಾಕ್ಷಿಯನ್ನು ದಿಃ **08.11.2023** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ಡಿ.ಹೆಚ್.ಆರ್ ಪರ ಶ್ರೀ ಪಿ.ಎಲ್.ಕೆ ವಕೀಲ**ರಿಂದ**</u>

ಸರ್ವೆ ನಂ. 4/5 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದು ಗೊತ್ತಿಲ್ಲ, 10 ಗುಂಟೆ ಮಾತ್ರ ಗೊತ್ತು. ಸರ್ವೆ ನಂ. 4/5 ರಲ್ಲಿ ಯಾರ್ಯಾರಿಗೆ ಎಷ್ಟೇಷ್ಟು ಭಾಗ ಆಗಿದೆ ಎಂದು ಕೂಡ ನನಗೆ ಗೊತ್ತಿಲ್ಲ. ಸರ್ವೆ ನಂ, 4/5 ರಲ್ಲಿ ಜೆ.ಡಿ.ಆರ್ 1 ರವರಿಗೆ ಎಷ್ಟು ಭಾಗ ಬಂದಿದೆ ಎಂದು ನನಗೆ ಗೊತ್ತಿಲ್ಲ. ರಾಮೇಗೌಡರು ಮತ್ತು ತಕರಾರುದಾರರಾದ ಮಂಜುನಾಥ ರವರು ಅನ್ಯೂನ್ಯವಾಗಿದ್ದಾರೆ ಎಂದರೆ ಸರಿ. ಸರ್ವೆ ನಂ. 4/5 ರ ಆರ್.ಟಿ.ಸಿಯನ್ನು ನಾನು ನೋಡಿಲ್ಲ. ಆರ್.ಟಿ.ಸಿ ಪ್ರಕಾರ ಯಾರ್ಯಾರಿಗೆ ಎಷ್ಟೇಷ್ಟು ಭಾಗ ಹೋಗಿದೆ ಎಂಬುದು ಕೂಡ ನನಗೆ ಗೊತ್ತಿಲ್ಲ. ರಾಮೇಗೌಡರಿಗೆ ಈ ಸ್ವತ್ತು ಪಿತ್ರಾರ್ಜಿತವಾಗಿ ಬಂದಿತ್ತು. ರಾಮೇಗೌಡ ಹಾಗೂ ತಕರಾರುದಾರರು ಕ್ರಯದ ಕರಾರು ಮಾಡಿಕೊಂಡಿದ್ದಾರೆ ಎಂದು ನಾನು ಹೇಳಿದ್ದು, ಸದರಿ ಕ್ರಯದ ಕರಾರಿನ ನಾನು ಸಾಕ್ಷಿಯಾಗಿ ಸಹಿ ಮಾಡಿರುವುದಿಲ್ಲ.

ನಾನು ಎಳನೀರು, ತರಕಾರಿ ಇತ್ಯಾದಿ ವ್ಯಾಪಾರ ಮಾಡುತ್ತೇನೆ ಎಂದು ಅವುಗಳನ್ನು ಫುಟ್ ಪಾತ್ ನಲ್ಲಿ ವ್ಯಾಪಾರ ಮಾಡುತ್ತೇನೆ. ನಮಗೆ ಮನುಗನಹಳ್ಳಿ ಗ್ರಾಮ ಪಂಚಾಯಿತಿ ಬರುತ್ತದೆ ಸದರಿ ಪಂಚಾಯಿತಿಯಿಂದ ನಾನು ಲೈಸನ್ಸ್ ಪಡೆದುಕೊಂಡಿಲ್ಲ, ಬೀದಿ ಬದಿ ವ್ಯಾಪಾರ ಮಾಡಲು ಯಾರು ಲೈಸನ್ಸ್ ಪಡೆದುಕೊಳ್ಳುತ್ತಾರೆ ಎನ್ನುತ್ತಾರೆ. ತಕರಾರುದಾರರು ಕ್ರಯಕ್ಕೆ ಪಡೆದುಕೊಂಡಿದ್ದಾರೆ ಎನ್ನಲಾದ 10 ಗುಂಟೆ ಜಮೀನಿನ ಚಕ್ಕುಬಂದಿ ನನಗೆ ಗೊತ್ತಿಲ್ಲ, ಚಕ್ಕುಬಂದಿ ಎಂದರೆ ಏನು ಎಂಬುದನ್ನು ವಿವರಿಸಿದ ನಂತರ ಸಾಕ್ಷಿ ಸೂರ್ಯ ಹುಟ್ಟೊ ಕಡೆ ಯಶೋಧಮ್ಮ, ಉತ್ತರಕ್ಕೆ ರಾಮೇಗೌಡ ಮತ್ತು ಅವರ ಅಣ್ಣ ತಮ್ಮಂದಿರ ಜಮೀನು, ಪಶ್ಚಿಮಕ್ಕೆ ಯಾರು ಇಲ್ಲ, ದಕ್ಷಿಣಕ್ಕೆ ಮುಖ್ಯ ರಸ್ತೆ ಇದೆ ಎನ್ನುತ್ತಾರೆ. ಜೆ.ಡಿ.ಆರ್ 1 ರವರ ಜಮೀನಿನ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ನಾನು ತರಕಾರಿ ವ್ಯಾಪಾರ ಮಾಡುತ್ತೇನೆ ಎಂಬ ಬಗ್ಗೆ

ದಾಖಲೆ ಹಾಜರುಪಡಿಸಿದ್ದೇನೆ ಎಂದು ಈ ಹಿಂದೆ ಹೇಳಿದ್ದು ನನ್ನ ಪ್ರಮಾಣ ಪತ್ರದಲ್ಲಿ ಬರೇಸಿದ್ದೇನೆ ಬೇರೆ ದಾಖಲೆ ಹಾಜರು ಪಡಿಸಿಲ್ಲ. ನಾನು ತಕರಾರುದಾರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ, ಆದಾಗ್ಯೂ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.